ಲೋಕಹಿತಂ ಮಮ ಕರಣೀಯಂ

# ಸೇವಾ ದಿಶಾ

ಹಿಂದು ಸೇವಾ ಪ್ರತಿಷ್ಠಾನದ ವಾರ್ತಾಪತ್ರಿಕೆ

ಸಂಪುಟ : 4 ಸಂಚಿಕೆ : 5 ಫೆಬ್ರವರಿ-2009 ಖಾಸಗಿ ಪ್ರಸಾರಕ್ಕಾಗಿ ಪುಟಗಳು : 8 ಬೆಲೆ : 5-00

# ಚಿಣ್ಣರ ಪ್ರತಿಭೆಗೆ ಮಕ್ಕಳ ಮಂಟಪದ ಮೆರಗು

## ನೆಲೆ ಪ್ರೇಮಾಂಜಲಿ ಆಶ್ರಯದಲ್ಲಿ ಮೂರು ದಿನ ಮಕ್ಕಳ ಮಂಟಪ ಕಾರ್ಯಕ್ರಮ

ಮೂರು ದಿನಗಳ ಕಾಲ(ಜನವರಿ2,3, ಮತ್ತು 4 ,2009) ವಿವಿಧ ಸ್ಪರ್ಧೆಗಳು, ಬೀದಿನಾಟಕ, ನೃತ್ಯ ಇತ್ಯಾದಿ ಚಟುವಟಿಕೆಗಳನ್ನು ಪ್ರಸ್ತುತಪಡಿಸುವುದರ ಮೂಲಕ ನೆಲೆ ಪ್ರೇಮಾಂಜಲಿ ಆಶ್ರಯದಲ್ಲಿ ಮಕ್ಕಳ ಮಂಟಪ ಕಾರ್ಯಕ್ರಮ ಜರುಗಿತು.

ದಿನಾಂಕ 2.1.2009 ರಂದು ಉದ್ಘಾಟನಾ ಸಮಾರಂಭದಲ್ಲಿ ಪ್ರೇಮಾಂಜಲಿ ಎಜುಕೇಶನ್ ಟ್ರಸ್ಟ್‌ನ ಅಧ್ಯಕ್ಷ ಶ್ರೀ ಬಾಲಕೃಷ್ಣ ಹೆಗಡೆ, ಜಯನಗರ ವಿಧಾನಸಭಾ ಕ್ಷೇತ್ರದ ಶಾಸಕ ಶ್ರೀ ಬಿ.ಎನ್. ವಿಜಯ ಕುಮಾರ್, ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಹಿಂದು ಸೇವಾ ಪ್ರತಿಷ್ಠಾನದ ಸಂಚಾಲಕ ಶ್ರೀ ಎಸ್.ಎಲ್. ಕೃಷ್ಣಮೂರ್ತಿ ಮತ್ತು ರಾಮಕೃಷ್ಣ ಫೋರಮ್‌ನ ಶ್ರೀ ಎಸ್. ಬಾಲಕೃಷ್ಣ ಇವರುಗಳು ಉಪಸ್ಥಿತರಿದ್ದರು.

ಚಿಕ್ಕವಯಸ್ಸಿನ ಮಕ್ಕಳಲ್ಲಿ ಮಾನವೀಯ ಗುಣಗಳನ್ನು ಬೆಳೆಸುವ ಕಾರ್ಯ ಆಗಬೇಕಿದೆ ಎಂದು ಪ್ರೇಮಾಂಜಲಿ ಎಜುಕೇಶನ್ ಟ್ರಸ್ಟ್‌ನ ಅಧ್ಯಕ್ಷ ಶ್ರೀ ಬಾಲಕೃಷ್ಣ ಹೆಗಡೆ ತಿಳಿಸಿದರು. ಸ್ಥಳೀಯ ಶಾಸಕ ಶ್ರೀ ಬಿ.ಎನ್. ವಿಜಯಕುಮಾರ್ ಮಾತನಾಡಿ ಈ ರೀತಿಯ ಮಕ್ಕಳ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದಾಗಿ ತಿಳಿಸಿದರು.



ದೀಪ ಬೆಳಗಿಸುತ್ತಿರುವ ಶಾಸಕ ಶ್ರೀ ಬಿ.ಎನ್.ವಿಜಯಕುಮಾರ್, ಪ್ರೇಮಾಂಜಲಿ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಬಾಲಕೃಷ್ಣ ಹೆಗಡೆ, ಪ್ರತಿಷ್ಠಾನದ ಸಂಚಾಲಕ ಶ್ರೀ ಶಿ.ಲ. ಕೃಷ್ಣಮೂರ್ತಿ



ಮಹಾಪುರುಷರ ವೇಷಧಾರಿ ಮಕ್ಕಳು

ರಾಗಿಗುಡ್ಡ ಸೇವಾ ವಸತಿಯಲ್ಲಿ ಮರಳಿ ಬಾ ಶಾಲೆಗೆ ಎಂಬ ವಿಷಯ ಆಧಾರಿತ ಬೀದಿ ನಾಟಕ ನಡೆಸಲಾಯಿತು. ಸಮಾರೋಪ ಸಮಾರಂಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. 3 ದಿನಗಳ ಕಾರ್ಯಕ್ರಮಗಳಲ್ಲಿ ಸುತ್ತಲಿನ 52 ಶಾಲೆಗಳ 2700 ಮಕ್ಕಳು ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದರು.

ಸಮಾರೋಪ ಸಮಾರಂಭದಲ್ಲಿ (ದಿನಾಂಕ: 4.1.2009 ರಂದು) ಸರ್ವಶಿಕ್ಷಣ ಅಭಿಯಾನದ ಸಹ ನಿರ್ದೇಶಕ ಕೆ.ಪಿ.ಹನುಮಂತರಾಯಪ್ಪ ಹಾಗು ಪ್ಯಾರಾ ಒಲಂಪಿಕ್ ಇಂಡಿಯಾ ಸಮಿತಿ ಸದಸ್ಯ ರಘುನಾಥ್ – ಇವರುಗಳು ಅತಿಥಿಗಳಾಗಿ ಆಗಮಿಸಿ, ವಿವಿಧ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಿಸಿದರು.

## ನಿವೇದನೆ....

**ನಮಸ್ಕಾರ**

ರಾಜ್ಯದಲ್ಲಿ ಪಬ್ ದಾಳಿ ಹಾಗೂ ಶಾಸಕ ರೋರ್ವರ ಪುತ್ರಿಯ ಅಪಹರಣ ಕೃತ್ಯಗಳು ರಾಷ್ಟ್ರಮಟ್ಟದ ಚರ್ಚೆಯ ವಿಷಯವಾಗಿದೆ. ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ನಡೆದ ಶಾಲಾ ವಿದ್ಯಾರ್ಥಿಯ ಪ್ರೇಮ ಪ್ರಕರಣವೊಂದು ಹೃದಯ ವಿದ್ರಾವಕ ಕೊಲೆಯಲ್ಲಿ ಅಂತ್ಯಗೊಂಡಿದ್ದು ಕೇಳಿದಾಗ, ದೂರದ ಐರೋಪ್ಯ ದೇಶಗಳಲ್ಲಿ ಅಥವಾ ಅಮೇರಿಕಾದಲ್ಲಿ ನಡೆಯಿತು ಎಂದು ಮಾತನಾಡಿಕೊಳ್ಳುತ್ತಿದ್ದ ಸಂಗತಿಗಳು, ದುರ್ಘಟನೆಗಳು ನಮ್ಮ ಬಾಗಿಲಿಗೇ ಬಂದು ಅಮರಿಕೊಂಡಿವೆ. ಜಾಗತೀಕರಣದ ಪರಿಣಾಮ ದಿಂದ ಇಂಥಹ ಕೆಟ್ಟ ಆಚಾರಗಳು ನಮ್ಮ ನೆಲಕ್ಕೆ ನುಸುಳುತ್ತಿವೆ. ಯಾವುದೇ ಆವೇಶಕ್ಕೆ ಒಳಗಾಗದೆ ಮುಂದಿನ ಪೀಳಿಗೆಗೆ ಈ ನೆಲದ ಸಂಸ್ಕೃತಿಯ ಅಮೃತ ಕಲಶವನ್ನು ಹಸ್ತಾಂತರಿಸುವ ನಿಟ್ಟಿನಲ್ಲಿ ಒಂದು ಕ್ಷಣ ಚಿಂತಿಸಿ ಪ್ರತಿಕ್ರಿಯಿಸಬೇಕಾಗಿದೆ.

ಮಂಗಳೂರಿನ ಪಬ್ ಪ್ರಕರಣದಲ್ಲಿ ಪಬ್‌ಗೆ ಹೋಗುವುದು, ಅಲ್ಲಿನ ಅಶ್ಲೀಲ ವರ್ತನೆಯನ್ನು ವಿರೋಧಿಸಿದ್ದು ಸಮವಯಸ್ಕರೇ ಹೊರತು ಮಧ್ಯವಯಸ್ಕರಲ್ಲ ಎಂಬುದು ಗಮನಿಸಬೇಕಾದ ಸಂಗತಿ.

ಫೆಬ್ರವರಿ 14 ಪ್ರೇಮಿಗಳ ದಿನಾಚರಣೆ ಭರಾಟೆ ನಡೆಯಲಿದೆ. ಶೇ 5% ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಯುವಕ ಯುವತಿಯರು ವ್ಯಾಲೆಂಟೈನ್ಸ್ ಡೇ ಅಚರಣೆಯ ಗುಂಗಿನಲ್ಲಿದ್ದರೂ ಮಾಧ್ಯಮಗಳ ಪ್ರಚಾರದ ಪರಿಣಾಮ ಅದೊಂದು ಬೃಹತ್ ಆಚರಣೆ ಆಗುತ್ತಿದೆ ಇದನ್ನು ಗಮನಿಸಬೇಕು. ನಮ್ಮ ಸುತ್ತಲು ಸರಿಯಾಗಿ ಕಣ್ಣರಳಿಸಿ ನೋಡಿದರೆ ಶುದ್ಧ ಜೀವನ ನಡೆಸುವ, ಸಮಾಜಕ್ಕೆ ಉಪಕಾರಿಯಾಗಿ ಬದುಕುತ್ತಿರುವ, ರೋಗಿಗಳ ಹಾಗೂ ವೃದ್ಧರ ಸೇವೆ ಮಾಡುತ್ತಿರುವ ಅನೇಕರು ಸಿಗುತ್ತಾರೆ. ಅವರಿಗೆ ಎಲ್ಲಿ ಪ್ರಚಾರ ಸಿಗುತ್ತಿದೆ? ಅಂತವರು ಪ್ರಕಾಶಕ್ಕೆ ಬಂದರೆ ಸಮಾಜದಲ್ಲಿ ಅನೇಕರಿಗೆ ಪ್ರೇರಣೆ ಸಿಗುತ್ತದೆ ಅಲ್ಲವೆ? ಬನ್ನಿ, ಊರಿಗೆ ಉಪಕಾರಿಗಳಾಗಿ ಜೀವನ ನಡೆಸು ತ್ತಿರುವ ಇಂತವರನ್ನು ಹುಡುಕೋಣ, ಅವರಿಂದ ಬೊಗಸೆಯಷ್ಟು ಅನುಭವ ಪಡೆಯೋಣ, ಆ ನಿಟ್ಟಿನಲ್ಲಿ ಮನಸ್ಸು ಮತ್ತು ಹೃದಯ ಬೆಸೆದು ಕಾರ್ಯಗೈಯೋಣ.

**ನಿಮ್ಮವ-ಸಂಪಾದಕ**

# ಭಾರತೀಯ ಕುಟುಂಬ ಜೀವನ - ಒಂದು ಸಂವಾದ



"ಭಾರತೀಯ ಕುಟುಂಬ" - ಒಂದು ಚಿಂತನೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಬಂಧು-ಭಗಿನಿಯರು

ದಿನಾಂಕ 28.1.2009 ರಂದು ಸಾಗರದ ನೆಹರು ಮೈದಾನದ ಸಮೀಪ "ಮಯೂರ" ಕುಟುಂಬದ ಹೊಸ ಮನೆಯ ಗೃಹಪ್ರವೇಶ ಪ್ರಯುಕ್ತ ಕಾರ್ಯಕ್ರಮ ಬೆಳಗ್ಗೆ 10.00 ಗಂಟೆಗೆ ಶ್ರೀ ಸತ್ಯಸಾಯಿ ಭಜನಾ ಮಂಡಳಿ ಮತ್ತು ಹಿಂದು ಸೇವಾ ಪ್ರತಿಷ್ಠಾನ, ಸಾಗರ ಬಳಗದವ ರಿಂದ ಸಾಮೂಹಿಕ ಭಜನಾ ಕಾರ್ಯಕ್ರಮವು ನಡೆಯಿತು. ತದನಂತರ ಹಿಂದು ಸೇವಾ ಪ್ರತಿಷ್ಠಾನದ ನಿರ್ದೇಶಕರಾದ ಶ್ರೀ ಶ್ರೀಧರ ಸಾಗರರವರ ಹಾಗೂ ಮಯೂರ ಪರಿವಾರದ ಹಿರಿಯ ಸದಸ್ಯರಾದ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತದ ಸೇವಾ ಪ್ರಮುಖರಾದ ಶ್ರೀ ವೆಂಕಟೇಶ ಸಾಗರರವರ ಉಪಸ್ಥಿತಿಯಲ್ಲಿ 'ಭಾರತೀಯ ಕುಟುಂಬ' ಎಂಬ ವಿಷಯದ ಬಗ್ಗೆ ಒಂದು ಮುಕ್ತ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಪ್ರತಿಷ್ಠಾನ ಬಳಗದ ಸದಸ್ಯರಾದ ಶ್ರೀಮತಿ ಜಯಾ ಆರ್.ಪೈ., ಶ್ರೀಮತಿ ಜ್ಯೋತಿ ನಂಜುಂಡಸ್ವಾಮಿ, ಭಗಿನಿ ವೇದಾರವರಿಂದ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭಿಸ ಲಾಯಿತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತರಾದ ಶ್ರೀ ರಾಜೇಂದ್ರ ಪೈರವರಿಂದ ಗಣ್ಯರ ಪರಿಚಯದ ನಂತರ ಸಂವಾದ ಪ್ರಾರಂಭವಾಯಿತು. ಬಂದಂತಹ ಸುಮಾರು 125 ಜನ ಆಹ್ವಾನಿತರಲ್ಲಿ ಹೆಚ್ಚಿನವರು ಸಂವಾದದಲ್ಲಿ ಅತಿ ಉತ್ಸಾಹದಿಂದ ತಮ್ಮ ಭಾವನಾತ್ಮಕ ಅನುಭವಗಳನ್ನು ಹಂಚಿಕೊಂಡರು. ಸಭಿಕರ ಅಪೇಕ್ಷೆಯ ಮೇರೆಗೆ ಮಯೂರ ಕುಟುಂಬದ ಸದಸ್ಯರಿಂದ ತಮ್ಮ ಮನೆಯ ಪರಂಪರೆ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆ ದೊರಕಿತು. ಮಯೂರ ಬಳಗದ ಸದಸ್ಯರಾದ ಶ್ರೀನಿವಾಸ ದಂಪತಿಗಳಿಂದ ಶ್ರೀಧರ ಸಾಗರರವರಿಗೆ ಮಂಗಳನಿಧಿಯು ಸಮರ್ಪಣೆಯಾಯಿತು. ಈ ಸಂವಾದ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಶ್ರೀಧರ ಸಾಗರರವರು ಭಾರತೀಯ ಕುಟುಂಬದ

(6ನೇ ಪುಟಕ್ಕೆ...)

## ಪ್ರತಿಸ್ಪಂದನ

**ಮಾನ್ಯ ಸಂಪಾದಕರಿಗೆ,**

ಅದಾಗಿ ಸಂಚಿಕೆ ತಲುಪಿತು. ಸಂಸ್ಕೃತದ ಬಗ್ಗೆ ವಿಚಾರ ಓದಿ ಸಂತಸವಾಯಿತು. ಅಜಿತ ಕುಮಾರ್‌ರವರ ಸಂಕಲ್ಪದ ಬೀಜ ಈಗ ಹೆಮ್ಮರವಾಗಿ ಬೆಳೆದು ನೆರಳು ಮತ್ತು ಫಲಗಳನ್ನು ಕೊಡುತ್ತಿದೆ. ಹಿಂದಿನ ಸಂಸ್ಕಾರದ ಅಪೂರ್ವ ಸಂಪತ್ತು ಎಲ್ಲರೂ ನೆನಪಿಸಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಬೇಕು. ಭಾರತದ ವಿಜ್ಞಾನಿ ಜಗದೀಶ್ ಚಂದ್ರಬೋಸ್ ಲೇಖನ ಓದಿದಾಗ ಎಂತಹ ಭಾರತ ಪುತ್ರ ಕರ್ಪೂರದಂತೆ ವಿಜ್ಞಾನಕ್ಕೆ ಅರ್ಪಿಸಿದ ಜೀವಿ, ತಾನು ಕಂಡು ಹಿಡಿದೆ ಎಂಬ ಅಭಿಮಾನವೂ ಇಲ್ಲ. ಕಾರಣ ಇದು ಎಲ್ಲವೂ ಮೊದಲೇ ನಿರ್ಮಿತವಾಗಿದೆ ಪ್ರಕೃತಿಯಿಂದ ಎಂದರು.

ನಮ್ಮ ಹಿಂದು ಸಂಸ್ಕೃತಿಯಲ್ಲಿ ತಿಂಗಳು, ದಿನ, ಹುಟ್ಟಿದ್ದು ನೋಡುವುದಿಲ್ಲ. ಸಂವತ್ಸರದ ತಿಂಗಳು, ಮಾಸ, ನಕ್ಷತ್ರ, ಮುಂತಾದವು ನೋಡಿ ಹುಟ್ಟಿದ ಹಬ್ಬ ರಥೋತ್ಸವ, ಉತ್ಸವ ನಡೆಯು ತ್ತದೆ. ಇತ್ತೀಚೆಗೆ ಎಲ್ಲರೂ ಹುಟ್ಟಿದ ತಿಂಗಳು, ದಿನಾಂಕ ನೋಡುತ್ತಾರೆ. ಇದು ನಮ್ಮ ಪದ್ಧತಿಯೇ? ಸರಿಯೇ? ತಿಳಿಸಿರಿ. ಲೇಖನ ಬರೆದು ಪ್ರಕಟಿಸಿದ ಪತ್ರಿಕೆಗೆ ಧನ್ಯವಾದಗಳು.

ಇಂತಿ ನಿಮ್ಮವ,

**ಎಸ್. ಆರ್. ವೆಂಕಟೇಶಮೂರ್ತಿ**

ಶಿರಾ, ತುಮಕೂರು ಜಿಲ್ಲೆ

ಹಿಂದು ಪಂಚಾಂಗದಂತೆ ಹುಟ್ಟುಹಬ್ಬ, ರಥೋತ್ಸವ ಇತ್ಯಾದಿ ಆಚರಿಸುವುದೇ ಸರಿ. -ಸಂಪಾದಕ

## ಅಮೃತ ಬಿಂದು

**ದೇವರದಿದೆಲ್ಲ ದೇವರಿಗೆಲ್ಲ ವೆಂದೊರಲು–।**
**ತಾವುದನುಮವನ ನಿರ್ಣಯಕೆ ಬಿಡದೆಯೆ ತಾಂ ॥**
**ದಾವನ್ತಬಡುತ ತನ್ನಿಚ್ಛೆಯನೆ ಘೋಷಿಸುವ ।**
**ಭಾವವೆಂತಹ ಭಕುತಿ ? – ಮಂಕುತಿಮ್ಮ ॥**

ನಾನು ಪೂರ್ತಿಯಾಗಿ ದೇವರನ್ನೇ ನಂಬಿದ್ದೇನೆ. ಎಲ್ಲಾ ಅವನ ಬಯಕೆಯಂತೆಯೇ ನಡೆಯಲಿ. "ತೇನ ವಿನಾ ತೃಣಮಪಿ ನ ಚಲತಿ" "ಭಗವಂತ! ನಿನ್ನಿಚ್ಛೆ ಯಿಲ್ಲದಿದ್ದರೆ ಒಂದು ಹುಲ್ಲುಕಡ್ಡಿಯೂ ಅಲ್ಲಾಡಲಾರದು", ಎಂದು ಬೊಬ್ಬೆ ಹಾಕುತ್ತಾ, ಆದರೆ ಯಾವುದನ್ನೂ ಅವನ ನಿರ್ಧಾರಕ್ಕೆ ಬಿಡದೆ ಆಯಾಸ ಪಡುತ್ತಾ (ದಾವನ್ತಬಡುತ), ತನಗೆ ಇದು ಬೇಕೆಂದು ತನ್ನಿಚ್ಛೆಯನ್ನೇ ಘೋಷಿಸುವ ಭಾವನೆ; ಇದು ಎಂತಹ ಭಕ್ತಿ? ನಾವು ಸರ್ವೇಸಾಮಾನ್ಯ ಯಾವಾಗಲೂ, ಮಾಡುವುದು ಇದೇ ತಾನೆ?

## ಸುದ್ದಿ ಸ್ವಾರಸ್ಯ

### ಮತ್ತೆ ತಲೆ ಎತ್ತಲಿದೆ ನಳಂದಾ

1,500 ವರ್ಷಗಳ ಹಿಂದೆ ಭಾರತದಲ್ಲಿದ್ದ ನಳಂದಾ ವಿಶ್ವವಿದ್ಯಾಲಯದ ಬಗ್ಗೆ ಕೇಳಿದ್ದೀರಲ್ಲವೇ? ಮುಸ್ಲಿಮ್ ಆಕ್ರಮಣಕಾರರ ದಾಳಿಗೆ ತುತ್ತಾದ ವಿಶ್ವವನ್ನೇ ತನ್ನತ್ತ ಸೆಳೆಯುತ್ತಿದ್ದ 10,000 ವಿದ್ಯಾರ್ಥಿಗಳು ಹಾಗೂ 2,000 ಶಿಕ್ಷಕರನ್ನು ಹೊಂದಿದ್ದ ಈ ವಿಶ್ವವಿದ್ಯಾಲಯ ಇಂದು ಬರಿ ನೆನಪು ಮಾತ್ರ. ಅದನ್ನೇ ಮತ್ತೆ ಪುನರುಜ್ಜೀವನಗೊಳಿಸಲಿದೆ ಏಷ್ಯಾದ ಕೆಲವು ದೇಶಗಳ ತಜ್ಞರ ತಂಡ. ಭಾರತ, ಸಿಂಗಪುರ, ಜಪಾನ್, ಚೀನಾ ಹಾಗೂ ಅಮೇರಿಕಾ ದೇಶಗಳ ಪ್ರೊಫೆಸರ್‌ಗಳ ತಂಡವೊಂದು ಈಗ ಬಿಹಾರದ ಬರ್‌ಗಾಂವ್ ಎನ್ನುವ ಹಳ್ಳಿಯಲ್ಲಿ ನಲಂದಾವನ್ನು ಮತ್ತೆ ಕಟ್ಟುವ ಯೋಜನೆ ಹಾಕಿಕೊಂಡಿದೆ. ನೊಬೆಲ್ ಪ್ರಶಸ್ತಿ ವಿಜೇತ ಭಾರತೀಯ ಅಮರ್ತ್ಯ ಸೇನ್ ನೇತೃತ್ವದಲ್ಲಿನ ಈ ತಂಡವು 2009ರಲ್ಲಿ ಇದನ್ನು ಪ್ರಾರಂಭಿಸಲು ಯೋಚಿಸಿದೆ. ಈ ಬಗ್ಗೆ ಯೋಜನೆಯನ್ನು ಚರ್ಚಿಸಲು ಈಗಾಗಲೇ ಜಪಾನ್ ಹಾಗೂ ಅಮೇರಿಕಾದಲ್ಲಿ ಹಲವು ಸಭೆಗಳು ನಡೆದಿವೆ.

(ಕೃಪೆ : '**ಪುಂಗವ**')

## ನಿರ್ದೇಶಕರ ನುಡಿ

### ವಿಶೇಷ ಮಕ್ಕಳ ವಿಶೇಷ ಸಾಧನೆ

ಬುದ್ಧಿಮಾಂದ್ಯ ಅಂಗವಿಕಲ ಮಕ್ಕಳನ್ನು ಆ ರೀತಿ ಕರೆಯದೆ ವಿಶೇಷ ಮಕ್ಕಳೆಂದು ಕರೆಯುವುದು ಇತ್ತೀಚಿನ ವರ್ಷಗಳಲ್ಲಿ ರೂಢಿಯಾಗಿದೆ. ಪ್ರತಿಷ್ಠಾನದ ಅರುಣ ಚೇತನ ಪ್ರಕಲ್ಪ ಬೆಂಗಳೂರಿನ ಮಲ್ಲೇಶ್ವರಂನಲ್ಲಿ ಬಹು ವಿಧದ ನ್ಯೂನ್ಯತೆ ಇರುವ ಮಕ್ಕಳ ಶಾಲೆ. 170 ಮಕ್ಕಳಿರುವ ಈ ಶಾಲೆಯ ಶಿಕ್ಷಕಿಯರು, ಶಿಕ್ಷಕರು ಹಾಗೂ ಪ್ರಾಂಶುಪಾಲರು, ಆಡಳಿತ ಮಂಡಳಿಯವರ ಸಮರ್ಪಣಾ ಭಾವದಿಂದಾಗಿ ಅತ್ಯಂತ ಉತ್ತಮ ಶಾಲೆ ಎಂದು ಬೆಂಗಳೂರಿನಲ್ಲಿ ಹೆಸರು ಪಡೆದಿದೆ. ಈ ಮಕ್ಕಳ ವೃತ್ತಿ ತರಬೇತಿ ಕೇಂದ್ರಕ್ಕೆ ಹೋದರೆ ಕಲಿಕೆಯಲ್ಲಿ ಅವರ ಆಸಕ್ತಿ, ಮಾಡಿರುವ ವಸ್ತುಗಳನ್ನು ನೋಡಿದಾಗ ಅವರ ಸಾಮರ್ಥ್ಯ ಏನೆಂದು ತಿಳಿಯಬಹುದು. ವಾರ್ಷಿಕೋತ್ಸವದಲ್ಲಿ ನೃತ್ಯ, ಹಾಡು, ನಾಟಕ, ರೂಪಕ ಇತ್ಯಾದಿ ವೈವಿಧ್ಯಮಯ ಕಾರ್ಯಕ್ರಮ ನೋಡುತ್ತಿರುವಾಗ ನಿರ್ವಹಣೆ ಮಾಡುವವರು ಒಂದೊಂದು ಮಗುವಿನ ನ್ಯೂನ್ಯತೆ ಬಗ್ಗೆ ಹೇಳದಲ್ಲಿ ನಂಬಲು ಸಾಧ್ಯವಾಗದ ರೀತಿಯಲ್ಲಿ ಅವರ ಪ್ರತಿಭೆ ಕಾಣಬಹುದು. ಪ್ರತಿ ವರ್ಷವೂ ಸಾಂದರ್ಭಿಕ ಸಂದೇಶ ನೀಡುವ ಒಂದು ವಿಶೇಷ ಕಾರ್ಯಕ್ರಮ ದಶಾವತಾರ, ಸುನಾಮಿ, ಜಾಗತಿಕ ತಾಪಮಾನದ ಹೆಚ್ಚಳ (Global Warming) ಇತ್ಯಾದಿ ಮೈ ನವಿರೇಳಿಸುವಂತಹ, ಮನಸ್ಸಿಗೆ ಮುದ ನೀಡುವ ರೂಪಕಗಳು.

ಕ್ರೀಡೆಯಲ್ಲೂ ಕೂಡ ಯಾವುದೇ ಸ್ಪರ್ಧೆಗೆ ಹೋದರೂ ಅರುಣ ಚೇತನದ ಮಕ್ಕಳಿಗೆ ಚಿನ್ನ, ಬೆಳ್ಳಿ ಪದಕಗಳು ನಿಶ್ಚಿತ. ಇದೀಗ ಫೆ.2 ರಿಂದ 25 ರವರೆಗೆ ಅಮೇರಿಕಾದ ಇದಾಹೋನಲ್ಲಿ ನಡೆಯಲಿರುವ ಪ್ಯಾರಾ ಒಲಂಪಿಕ್ಸ್‌ನಲ್ಲಿ ಫ್ಲೋರ್ ಹಾಕಿ ಪಂದ್ಯಕ್ಕೆ ಕರ್ನಾಟಕದಿಂದ ಆಯ್ಕೆಯಾದ ನಾಲ್ವರಲ್ಲಿ ತ್ಯಾಗರಾಜ ಮತ್ತು ರಾಜು ಇಬ್ಬರು ನಮ್ಮ ಶಾಲೆಯವರು ಎಂಬುದೇ ಹೆಮ್ಮೆಯ ವಿಷಯ. ಜೊತೆಗೆ ಬೆಂಗಳೂರಿನ ಗಿಸಂ ಸಂಸ್ಥೆಯ ರೂಪ ಹಾಗೂ ದಾವಣಗೆರೆಯ ಆಶಾಕಿರಣ ಸಂಸ್ಥೆಯ ಚಂದ್ರಕಲಾ ಕೂಡ ಇದ್ದಾರೆ. ಜನವರಿ 20 ರಂದು ಈ ನಾಲ್ವರ ಜೊತೆಗೆ ತರಬೇತುದಾರ ಶ್ರೀ ಅಮರೇಂದ್ರ ಅವರನ್ನು ಸಂಭ್ರಮದಿಂದ ಶುಭಹಾರೈಸಿ ಬೀಳ್ಕೊಡಲಾಯಿತು.

ತ್ಯಾಗರಾಜು ಮತ್ತು ರಾಜು ಹುಟ್ಟು ಕಿವುಡರು, ಮೂಕರು ಕೂಡ. ಚಿಕ್ಕಂದಿನಿಂದ ನಮ್ಮ ಶಾಲೆಯಲ್ಲಿಯೇ ಓದಿದವರು. ಸರಿಯಾಗಿ ನಡೆಯಲು ಕೂಡ ಬಾರದಿದ್ದಾಗ ಸೇವಾವ್ರತಿಗಳಾದ ವನಿತಾ ಮತ್ತು ನರ್ಮದಾ ಈ ಮಕ್ಕಳನ್ನು ಮೈದಾನಕ್ಕೆ ಕರೆದುಕೊಂಡು ಹೋಗಿ ತಮ್ಮ ಒಂದೊಂದು ಕಾಲಿಗೆ ಒಬ್ಬೊಬ್ಬರನ್ನು ಕಟ್ಟಿಕೊಂಡು (ಮೂರು ಕಾಲಿನ ಓಟದಂತೆ) ಓಡುವುದನ್ನು ಅಭ್ಯಾಸ ಮಾಡಿಸಿದ್ದು ನೆನೆದಾಗ ಅವರುಗಳ ಸಾಹಸ, ತಾಳ್ಮೆ, ಸಮರ್ಪಣೆ, ಆ ಮಕ್ಕಳ ಬಗ್ಗೆ ಇದ್ದ ಪ್ರೀತಿ ಎಂತಹುದೆಂಬುದನ್ನು ಅರ್ಥ ಮಾಡಿಕೊಳ್ಳಬಹುದು. ಈಗ ತರಬೇತುದಾರ ಅಮರೇಂದ್ರ ಅವರ ಸತತ ಪರಿಶ್ರಮದಿಂದಾಗಿ ಪ್ಯಾರಾ ಒಲಂಪಿಕ್ಸ್‌ನಲ್ಲಿ ಈ ಮಕ್ಕಳು ಆಯ್ಕೆಯಾಗಿರುವುದು ತುಂಬಾ ಅಭಿಮಾನದ ಸಂಗತಿ. ಅಮೇರಿಕಾದಲ್ಲಿ ಕೂಡ ಇವರುಗಳು ಸ್ಪರ್ಧೆಯಲ್ಲಿ ವಿಜಯಿಗಳಾಗಿ ಬರಲೆಂದು ನಾವೆಲ್ಲ ಮನದಾಳದಿಂದ ಹಾರೈಸೋಣ. **ವಿಶೇಷ ಮಕ್ಕಳ ವಿಶೇಷ ಸಾಧನೆಗೆ** ಮುಂದೆ ಸಂಭ್ರಮದಿಂದ ಸ್ವಾಗತಕ್ಕಾಗಿ ಕಾಯೋಣ. ಜಗತ್ತಿನಲ್ಲಿ ಅಯೋಗ್ಯರು ಯಾರೂ ಇಲ್ಲ. ಜೋಡಿಸುವವರು ಮಾತ್ರ ವಿರಳ. ಪ್ರತಿಯೊಬ್ಬ ವ್ಯಕ್ತಿಯೂ ಮೂಲತಃ "ಚೈತನ್ಯ ಸ್ವರೂಪಿ" ಎಂಬ ನಂಬಿಕೆ ಇಂತಹ ಮಕ್ಕಳನ್ನು ನೋಡಿದಾಗ ಮತ್ತಷ್ಟು ದೃಢವಾಗುತ್ತದೆ ಅಲ್ಲವಾ?

**- ಶ್ರೀಧರ್ ಸಾಗರ್**

## ಪುಸ್ತಕದ ಪುಟಗಳಿಂದ

### ನಿಮ್ಮನ್ನು ನೀವು–

**ಕೃತಿ : ಶರೀರ ಶಿಲ್ಪ; ಲೇ. : ಅಜಿತ ಕುಮಾರ್**

ಇದೆಲ್ಲಕ್ಕೂ ಒಂದೇ ಪರಿಹಾರ. ವ್ಯಾಯಾಮ ದಿನನಿತ್ಯದ 'ಅನಿವಾರ್ಯ' ಗಳಲ್ಲಿ ಒಂದಾಗಬೇಕು – ನಿತ್ಯವೂ ತಲೆ ಬಾಚುವಂತೆ, ಹಲ್ಲು ಉಜ್ಜುವಂತೆ.

ಸಾಮಾನ್ಯವಾಗಿ ವ್ಯಾಯಾಮದಲ್ಲಿ ಸ್ವಲ್ಪ ವಿಶೇಷ ಶ್ರಮದ ಭಾಗವೂ ಸೇರಿದ್ದರೆ ಉತ್ತಮ–ಓಟ, ಈಜು, ಶೀಘ್ರ ನಡಿಗೆ ಇತ್ಯಾದಿ. ಇವಾವುದನ್ನೂ ಮಾಡಲಾರದ ಸ್ಥಿತಿಯಲ್ಲಿ ಇರುವವರಿಗೆ ಸುಲಭವಾಗಿ ಸಾಕಷ್ಟು ಪರಿಣಾಮಕಾರಿಯಾದ ರೀತಿಯಲ್ಲಿ ಮಾಡುವ ಅನೇಕ ವ್ಯಾಯಾಮಗಳಿವೆ. ಉದಾಹರಣೆಗೆ, ನೀವು ಹಲ್ಲು ಉಜ್ಜುವ ಸಮಯದಲ್ಲಿಯೇ ಉದರದ ಸ್ನಾಯುಗಳನ್ನು ಒಳಗೆಳೆದುಕೊಂಡು, ಪೃಷ್ಠಗಳನ್ನು ಸಂಕೋಚಗೊಳಿಸಿ ಪೂರ್ಣ ಪಾದದ ಮೇಲೆ ನಿಲ್ಲದೆ ಬೆರಳ ತುದಿಯ ಮೇಲೇ ನಿಂತು ಕೆಲಸ ಮುಗಿಸಿ. ಬಸ್ಸು ಹಿಡಿಯಲು ಹೊರಟಾಗ ದೊಡ್ಡ ಹೆಜ್ಜೆ ಹಾಕಿರಿ, ಶ್ವಾಸದೀರ್ಘ ಮಾಡಿರಿ ಮತ್ತು ಹಿಮ್ಮಡಿ ಮೊದಲು ನೆಲ ತಗುಲಲಿ. ಓಡುವ ಪ್ರಸಂಗ ಬಂದಾಗಲೆಲ್ಲಾ ಸಂಕೋಚಮಾಡದೆ ಓಡಿರಿ. ಒಳನಿಕ್ಕರ್, ಕಾಲುಚೀಲ ಹಾಕುವಾಗ ತೆಗೆಯುವಾಗ, ಮತ್ತಿತರ ಸಂದರ್ಭಗಳಲ್ಲಿ ಒಂಟಿ ಕಾಲಲ್ಲಿ ನಿಲ್ಲಿರಿ. ವಾಹನಗಳಲ್ಲಿ ಓಡಾಡುವವರು ಒಂದು ಟ್ರಾಫಿಕ್ ಸಿಗ್ನಲ್ ನಿಂದ ಇನ್ನೊಂದು ಸಿಗುವವರೆಗೆ ಬೆನ್ನು ನೇರ ಮಾಡಿ, ಉದರದ ಸ್ನಾಯುಗಳನ್ನು ಒಳಗೆಳೆದುಕೊಂಡು ಕೂಡಿರಿ. ಹೆಚ್ಚುಹೊತ್ತು ಅದೇ ರೀತಿ ಇರಲು ಯತ್ನಿಸಿ. ಅನಿವಾರ್ಯವಿಲ್ಲದಾಗ ಮೇಲೇರಲು 'ಲಿಫ್ಟ್' ಉಪಯೋಗಿಸಬೇಡಿ. ಮನೆಯಲ್ಲಿರುವಾಗ ಒಂಟಿ ಕಾಲಲ್ಲಿ ಮತ್ತು ತುದಿ ಗಾಲಲ್ಲಿ ನಿಂತು ಪೇಪರ್ ಓದಿ, ಮಕ್ಕಳನ್ನು ಆಡಿಸುವಾಗ ಐದಾರು ಬಾರಿ ಚಾವಣಿಯ ಕಡೆ ಆದಷ್ಟು ಮೇಲೆ ಎತ್ತಿ ಹಿಡಿಯಿರಿ.

ಹೀಗೆ ಸ್ವಲ್ಪ ಯೋಚಿಸಿ ಅನೇಕ ಸುಲಭ ವ್ಯಾಯಾಮದ ಪ್ರಕಾರಗಳನ್ನು ಜೋಡಿಸಿಕೊಳ್ಳಬಹುದು.

ಅನೇಕರಿಗೆ ದಿನದಲ್ಲಿ ಬಹಳ ಹೊತ್ತು ಬಳಲಿಕೆಯೂ, ದಿನವಿಡೀ ಬೇಜಾರೂ, ಸ್ವಲ್ಪ ಕೆಲಸದ ಅನಂತರ ವಿಶ್ರಾಂತಿ ಅನಿವಾರ್ಯವೂ ಆಗುವುದು. ಅಂತಹವರು ಒಮ್ಮೆ ನಿಲುವುಗನ್ನಡಿಯ ಮುಂದೆ ನಿಲ್ಲಲಿ. ಸಾಮಾನ್ಯವಾಗಿ ಅವರಿಗೇ ಅರ್ಥವಾಗುವುದು – ತಮ್ಮ ಶರೀರದ ತೂಕ, ಗಾತ್ರ ಅಗತ್ಯಕ್ಕಿಂತ ಹೆಚ್ಚಿದೆ ಎಂದು. ಹೆಚ್ಚು ತೂಕವನ್ನು ಹೊತ್ತೂ ಹೊತ್ತೂ ಸಹಜವಾಗಿ ಶರೀರ ಹೆಚ್ಚು ಬಳಲುತ್ತದೆ. ಶರೀರಕ್ಕೆ ಹೆಚ್ಚು ಕೆಲಸ; ಶೀಘ್ರ ಸುಸ್ತು. ವಿಪರೀತ ಕೆಲಸ ಮಾಡಿದ ಸ್ನಾಯುಗಳಲ್ಲಿ ವಿಷಪದಾರ್ಥಗಳು ಸಂಗ್ರಹವಾಗಿ, ಅವುಗಳ ನಿರ್ಮೂಲನಕ್ಕೆ ಆವಶ್ಯಕವಾದ ಆಮ್ಲಜನಕದ ಸರಬರಾಜು ಸಾಲದೆ ಹೋಗಿ ನೋವು ಕಾಣಿಸುತ್ತದೆ.

ಈ ರೀತಿ ಬಳಲುವವರಲ್ಲಿ ತೂಕ, ಗಾತ್ರ ಹೆಚ್ಚಿಲ್ಲದೆ ಇರುವವರೂ ಇರಬಹುದು. ಅಂತಹವರಿಗೆ ಇನ್ನೊಂದು ಪುಟ್ಟ ಪರೀಕ್ಷೆ. ಸೆಕೆಂಡ್‌ಗಳನ್ನು ತೋರಿಸುವ ನಿಮ್ಮ ಕೈಗಡಿಯಾರವನ್ನು ಅಂಗೈಯಲ್ಲಿ ಹಿಡಿಯಿರಿ. ಸಾಧ್ಯವಾದಷ್ಟೂ ದೀರ್ಘವಾಗಿ ಉಸಿರು ತೆಗೆದುಕೊಳ್ಳಿರಿ. ಸೆಕೆಂಡ್‌ಗಳನ್ನು ಗುರುತು ಹಾಕಿ. ಅದೇ ರೀತಿ ಉಸಿರು ಬಿಗಿಹಿಡಿಯದೆ ನಿಧಾನವಾಗಿ ಉಸಿರನ್ನು ಬಿಡಿ. ಸೆಕೆಂಡ್‌ಗಳನ್ನು ಗುರುತು ಹಾಕಿ. ಬೇಗ ಬಳಲುವ ವ್ಯಕ್ತಿಗಳೆಲ್ಲರ ಶ್ವಾಸ, ನಿಶ್ವಾಸ ಸಮಯ 3 ರಿಂದ 5 ಸೆಕೆಂಡುಗಳಿರಬಹುದು. ಇದೇ ಕಾರಣ – ರಕ್ತಶುದ್ಧಿಗೆ ಬೇಕಾದ ಪ್ರಮಾಣದಲ್ಲಿ ಆಮ್ಲಜನಕ ಸರಬರಾಜು ಇಲ್ಲದಿರುವುದು. *(ಮುಂದುವರಿಯುವುದು)*

## ಉಪ್ಪಿನಂಗಡಿ ಕಾರ್ಯಕ್ರಮಗಳು

### ಉಪ್ಪಿನಂಗಡಿಯಲ್ಲಿ ಭಗವದ್ಗೀತಾ ಪಠಣ ತರಗತಿ

ಶ್ರೀ ಮಾಧವ ಶಿಶು ಮಂದಿರ ಸಮಿತಿಯ ಆಶ್ರಯದಲ್ಲಿ ಭಗವದ್ಗೀತ ಪಠಣ ತರಗತಿಯು ಇತ್ತೀಚೆಗೆ ಉಪ್ಪಿನಂಗಡಿ ವೇದಶಂಕರ ನಗರದಲ್ಲಿನ ಶಿಶುಮಂದಿರದಲ್ಲಿ ಉದ್ಘಾಟನೆಗೊಂಡಿತು.

ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಉಪ್ಪಿನಂಗಡಿ ಜೇಸಿರೇಟ್ ಅಧ್ಯಕ್ಷೆ ಶ್ರೀಮತಿ ಪುಷ್ಪಲತಾ ತಿಲಕ್‌ರವರು ಭಗವದ್ಗೀತೆಯು ನಮ್ಮ ಕೈಯಲ್ಲಿರುವ ಅಮೃತ ಕಲಶವಿದ್ದಂತೆ. ಅದರ ಶ್ರವಣ, ಮನನ, ಅನುಷ್ಠಾನದೊಂದಿಗೆ ಬದುಕನ್ನು ಭವ್ಯತೆಯತ್ತ ಕೊಂಡೊಯ್ಯಲು ಸಾಧ್ಯವಾಗುವುದು. ಇಂತಹ ಗ್ರಂಥದ ಅರಿವು ಇಡೀ ಮನುಕುಲಕ್ಕೆ ಆಗಬೇಕಾಗಿದೆ. ಈ ದಿಶೆಯಲ್ಲಿ ಭಗವದ್ಗೀತಾ ಪಠಣ–ಮನನ ತರಗತಿಗಳನ್ನು ನಡೆಸಲು ಶ್ರೀ ಮಾಧವ ಶಿಶುಮಂದಿರ ಸಮಿತಿಯು ಮುಂದಾಗಿರುವುದು ಶ್ಲಾಘನೀಯವೆಂದರು. ಬದುಕಿನಲ್ಲಿ ಎದುರಾಗುವ ಸರ್ವ ಸಂಕಷ್ಟಗಳಿಗೂ ಪರಿಹಾರವನ್ನು ತಿಳಿಸುವ ಭಗವದ್ಗೀತೆಯ ಬಗ್ಗೆ ಅರಿವು ಹೊಂದಿದ್ದರೆ ಬದುಕು ನಂದನವನ ಆಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಉದ್ಯಮಿ, ಯು.ಸತೀಶ್ ಶೆಟ್ಟಿ ಸುವ್ವರವರು ಮಾತನಾಡಿ, ಇಡೀ ವಿಶ್ವಕ್ಕೆ ಮಾರ್ಗದರ್ಶನ ನೀಡಬಲ್ಲ ಧರ್ಮ ಗ್ರಂಥಗಳು ಅಗಣಿತ ಸಂಖ್ಯೆಯಲ್ಲಿ ಇದ್ದರೂ, ಅವುಗಳ ಬಗ್ಗೆ ಕನಿಷ್ಠ ಅರಿವು ಕೂಡಾ ನಮ್ಮ ಜನರಲ್ಲಿ ಇಲ್ಲದಿರುವುದು ದುರಂತವೇ ಸರಿ. ಈ ಬಗ್ಗೆ ಧರ್ಮ ಸಂಸ್ಥೆಗಳು, ದೇವಾಲಯಗಳು ತಮ್ಮ ಕರ್ತವ್ಯದಿಂದ ವಿಮುಖವಾದ ಪರಿಣಾಮ ಇದಾಗಿದೆ. ನಾಡಿನಲ್ಲೆಡೆ ಈ ರೀತಿ ಧರ್ಮ ಗ್ರಂಥಗಳಬಗ್ಗೆ ಅರಿವು ಮೂಡಿಸುವ ತರಗತಿಯನ್ನು ನಡೆಸಲು ಸಂಘ ಸಂಸ್ಥೆಗಳು ಮುಂದಾಗಲಿ ಎಂದರು.

ಸಮಿತಿ ಕಾರ್ಯದರ್ಶಿ ಯು.ಎಲ್. ಉದಯ್ ಕುಮಾರ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ರಮ್ಯ ಮಾತಾಜಿ ಸ್ವಾಗತಿಸಿ, ರಾಘವೇಂದ್ರ ನಾಯಕ್ ನಟ್ಟಿಬೈಲು ವಂದಿಸಿದರು.

### ಉಪ್ಪಿನಂಗಡಿಯಲ್ಲಿ ಭಗವದ್ಗೀತೆ ವಿತರಿಸಿ ಸೇವಾ ದಿನಾಚರಣೆ

ಉಪೇಕ್ಷಿತ ಬಂಧುಗಳಿಗೂ ತಮ್ಮ ಧರ್ಮಗ್ರಂಥಗಳ ಬಗ್ಗೆ ಸಂಪೂರ್ಣ ಅರಿವು ಮೂಡಿಸಿ, ಅದರಲ್ಲಿನ ಜೀವನ ಮೌಲ್ಯಗಳನ್ನು ಅರಿತುಕೊಳ್ಳುವ ಸಲುವಾಗಿ ಅವರಿಗೆ ಉಪ್ಪಿನಂಗಡಿಯ ಶ್ರೀ ಮಾಧವ ಶಿಶು ಮಂದಿರ ಸಮಿತಿಯ ವತಿಯಿಂದ ಭಗವದ್ಗೀತೆಯನ್ನು ವಿತರಿಸಿ, ಹಿಂದು ಸೇವಾ ಪ್ರತಿಷ್ಠಾನದ ಸಂಸ್ಥಾಪಕ ಸ್ವರ್ಗೀಯ ಅಜಿತ್ ಕುಮಾರ್ ಸ್ಮರಣಾರ್ಥ ಸೇವಾ ದಿನಾಚರಣೆಯನ್ನು ಆಚರಿಸಲಾಯಿತು.

ವೇದ ಶಂಕರ ನಗರದಲ್ಲಿನ ಶಿಶುಮಂದಿರದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸಂಸ್ಕೃತ ಪ್ರಾಧ್ಯಾಪಕ ಸೂರ್ಯಪ್ರಕಾಶ್ ಉಡುಪರವರು ಶ್ರೀಕೃಷ್ಣ ನೀಡಿದ ಭಗವದ್ಗೀತೆ ಮನುಕುಲದ ಉದ್ಧಾರಕ್ಕೆ ಸಂಬಂಧಿಸಿದ್ದಾಗಿದೆ. ಅದು ಸನ್ನಿವೇಶಕ್ಕೆ ತಕ್ಕಂತೆ ಧರ್ಮ ಶಾಸ್ತ್ರವೂ ಹೌದು, ಮನಶಾಸ್ತ್ರವೂ ಹೌದು, ತತ್ವ ಶಾಸ್ತ್ರವೂ ಹೌದಾಗಿದೆ. ಮನುಷ್ಯನ

(7ನೇ ಪುಟಕ್ಕೆ...)

# ನೆಲೆ ನಿವೇದಿತಾ ಆಶ್ರಯದಲ್ಲಿ ಆಕರ್ಷಕ ಮಕ್ಕಳ ಮಂಟಪ

ದಿನಾಂಕ 11.01.2009 ರಂದು ವಿದ್ಯಾನಿಕೇತನ ಶಾಲೆ ಆವರಣ, ಉಲ್ಲಾಳ ಮುಖ್ಯರಸ್ತೆ, ಬೆಂಗಳೂರಿನಲ್ಲಿ ಪ್ರಾರಂಭವಾದ ಮಕ್ಕಳ ಮಂಟಪ ಕಾರ್ಯಕ್ರಮ ಚಿಕ್ಕ ಓಲಂಪಿಕ್ಸ್ ಕ್ರೀಡೆಯಂತಿತ್ತು.

ಅತಿಥಿಗಳನ್ನು ವೇದಿಕೆಗೆ ಕರೆತರಲು ಬ್ಯಾಂಡ್ ಸೆಟ್ ಸಮೇತ ನಡೆಸಿದ ಪಥ ಸಂಚಲನ, ಎಲ್ಲಾ ಮಕ್ಕಳು ಮೈದಾನದಲ್ಲಿ ಇದ್ದ ರೀತಿ ಅತ್ಯಾಕರ್ಷಕ ವಾಗಿತ್ತು. ಅತಿಥಿಗಳು ಜ್ಯೋತಿಯನ್ನು ಬೆಳಗಿಸಿದರು. ಮುಂಬೈ ಉಗ್ರರ ದಾಳಿಯಲ್ಲಿ ತಮ್ಮ ಪ್ರಾಣವನ್ನು ದೇಶಕ್ಕೆ ಅರ್ಪಿಸಿದ ವೀರ ಯೋಧರಾದ ದಿ॥ ಮೇಜರ್ ಸಂದೀಪ್ ಉನ್ನಿಕೃಷ್ಣನ್, ದಿ॥ ಅಶೋಕ ಕಾಮಟೆ, ದಿ॥ ವಿಜಯ್ ಸಾಲಸ್ಕರ್, ದಿ॥ ಹೇಮಂತ್ ಕರ್ಕರೆಯವರಿಗೆ ಒಂದು ನಿಮಿಷದ ಮೌನಾಚಾರಣೆ ನಂತರ ಕಾರ್ಯಕ್ರಮ ಪ್ರಾರಂಭವಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಎ.ಎಂ.ಹನುಮಂತೇಗೌಡ, ಮುಖ್ಯ ಭಾಷಣಕಾರರಾಗಿ, ಶ್ರೀ ಎ.ಎಸ್.ಭೀಮಣ್ಣ (ಕಾರ್ಯದರ್ಶಿ, ಪ್ರತಿಷ್ಠಾನ ಬಳಗ), ಮುಖ್ಯ ಅತಿಥಿಗಳಾಗಿ, ಶ್ರೀ ವಿ. ಕೃಷ್ಣಮೂರ್ತಿ, ಹಾಗೂ ಶ್ರೀ ಅನಿಲ್ ಕುಮಾರ್‌ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮುಖ್ಯ ಭಾಷಣಕಾರರಾಗಿ, ಶ್ರೀ ಎ.ಎಸ್.ಭೀಮಣ್ಣ ನವರು ಮಾತನಾಡಿ ಆರ್ಯಸಮಾಜದ ಸ್ಥಾಪಕರಾದ ದಯಾನಂದ ಸರಸ್ವತಿಯವರಿಗೆ ದೀನದಲಿತರ ಬಗ್ಗೆ ಮನಃ ಪರಿವರ್ತನೆಯಾದ 150 ವರ್ಷಗಳ ಹಿಂದಿನ ಕಥೆಯನ್ನು ವಿವರಿಸಿದರು. ಹಿಂದು ಸೇವಾ ಪ್ರತಿಷ್ಠಾನ ಕಳೆದ 28 ವರ್ಷ ಗಳಿಂದ ಸಮಾಜ ಆಧಾರಿತ ಸಂಸ್ಥೆ ಹಾಗೂ ಸಮಾಜಕ್ಕೆ ಆಧಾರಸಂಸ್ಥೆ ನೆಲೆ ನಿವೇದಿತಾ - ಅನಾಥ ಮಕ್ಕಳ ಆಶ್ರಯತಾಣ. ಊಟ, ಬಟ್ಟೆ, ಸಂಸ್ಕಾರ, ಆರೋಗ್ಯವನ್ನು ನೋಡಿಕೊಳ್ಳುವುದರ ಜೊತೆಗೆ ಮೇಲು ಕೀಳು ಭೇದ ಭಾವ ತೊಡೆದು ಆರೋಗ್ಯಕರವಾಗಿರುವ ಮಕ್ಕಳನ್ನು ಸಮಾಜಕ್ಕೆ ನೀಡುತ್ತದೆ ಎಂದರು.

ಕೊನೆಯಲ್ಲಿ ಮಕ್ಕಳು ಆಟ, ಪಾಠ, ಸ್ವಚ್ಛತೆ ಹಾಗೂ ಎಲ್ಲಾ ಕೆಲಸದಲ್ಲಿ ಮನಸಿಟ್ಟು ಕೆಲಸಮಾಡಿ ಒಳ್ಳೆ ಪ್ರಜೆಗಳಾಗಿ ಬುದ್ಧಿವಂತರಾಗಿ ಬಾಳಿ ಎಂದು ಹರಸಿದರು.

ವಂದನಾರ್ಪಣೆಯನ್ನು ಶ್ರೀ ಅರವಿಂದರವರು ನಡೆಸಿಕೊಟ್ಟರು. ಬಾಲಕ ಹಾಗೂ ಬಾಲಕಿಯರಿಗೆ ಬೇರೆ ಬೇರೆ ರೀತಿಯ ಸ್ಪರ್ಧೆಗಳನ್ನು ಆಯೋಜಿಸ ಲಾಗಿತ್ತು.



ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ



ಅಭ್ಯಾಗತರಿಗೆ ಘೋಷ್ ಸಹಿತ ವಿದ್ಯಾರ್ಥಿಗಳಿಂದ ಸ್ವಾಗತ ಕೋರುತ್ತಿರುವುದು

ಸಂಜೆ ಸಮಾರೋಪ ಕಾರ್ಯಕ್ರಮದ ಅಧ್ಯಕ್ಷರಾದ ಶ್ರೀ ಬಿ.ಎಲ್.ಎನ್. ಹೆಗಡೆ, ಮುಖ್ಯ ಭಾಷಣಕಾರರಾದ ಶ್ರೀ ಶ್ರೀಧರ ಸಾಗರ, ಮುಖ್ಯ ಅತಿಥಿ ಗಳಾದ ಶ್ರೀ ಬಿ.ಕೆ.ಹನುಮಂತಯ್ಯ ಹಾಗೂ ಶ್ರೀಮತಿ ಶಾಲಿನಿ ನಟರಾಜ್ ರವರು ಉಪಸ್ಥಿತರಿದ್ದರು. ಪಥ ಸಂಚಲನದ ಮೂಲಕ ಮಕ್ಕಳು ಉಪಸ್ಥಿತ ಗಣ್ಯರಿಗೆ ಗೌರವ ವಂದನೆಯನ್ನು ಸಲ್ಲಿಸಿದರು.

ನಂತರ ನಿವೇದಿತಾ ನೆಲೆಯ ಬಾಲಕಿ ರಾಜೇಶ್ವರಿ ನಡೆಸಿಕೊಟ್ಟ ನೃತ್ಯ ಎಲ್ಲರ ಗಮನ ಸೆಳೆಯಿತು. ವಿವಿಧ ಶಾಲಾ ಮಕ್ಕಳು ಹಾಗೂ ನೆಲೆ ಮಕ್ಕಳು ಅತಿಥಿಗಳ ಪರಿಚಯವನ್ನು ಮಾಡಿಕೊಟ್ಟರು. ಅಧ್ಯಕ್ಷರಾದ ಶ್ರೀ ಬಿ.ಎಲ್.ಎನ್. ಹೆಗಡೆ ಮಾತನಾಡಿ ಹಿಂದು ಸೇವಾ ಪ್ರತಿಷ್ಠಾನದ ಉದ್ದೇಶ ತಿಳಿದು ಸಂತೋಷವಾಯಿತು ಎಂದರು. ಮಕ್ಕಳನ್ನುದ್ದೇಶಿಸಿ ನೀವು ಒಳ್ಳೆಯ ಪ್ರಜೆಗಳಾಗಿ, ತಂದೆ-ತಾಯಿಗೆ ಹೆಸರನ್ನು, ಕೀರ್ತಿಯನ್ನು ತರಬೇಕು. ಜೀವನದಲ್ಲಿ ಒಳ್ಳೆಯ ಕೆಲಸವನ್ನು ಮಾಡಬೇಕೆಂದರು. ನೆಲೆಗೆ ಸಂಸ್ಥೆ ಯಿಂದಾಗಲೀ, ವೈಯಕ್ತಿಕವಾಗಿಯಾಗಲಿ ಸಹಾಯ ಮಾಡುತ್ತೇನೆ ಎಂದು ಭರವಸೆಯನ್ನು ಕೊಟ್ಟರು.

ಮುಖ್ಯ ಅತಿಥಿಗಳಾದ ಶ್ರೀ ಬಿ.ಕೆ.ಹನುಮಂತಯ್ಯ ಮಾತನಾಡಿ ನೃತ್ಯ ನೋಡಿ ತುಂಬಾ ಸಂತೋಷವಾಯಿತು. ನೀವೆಲ್ಲಾ ನಕ್ಷತ್ರ ಪುಂಜಗಳಂತೆ ಬೆಳಗುತ್ತಿರುವ ಮಕ್ಕಳು. ನಿಮ್ಮಲ್ಲಿ ಶಿಸ್ತು, ಸಂಯಮ ಬೆಳೆಸಿಕೊಳ್ಳಿ. ನೀವು ದೇಶಕ್ಕೆ ದೊಡ್ಡ ಆಸ್ತಿ ಆಗುತ್ತೀರಿ. ಸರಿಯಾಗಿ ಮಾರ್ಗದರ್ಶನ ನೀಡುವ ನಿರ್ದೇಶಕರು ನಿಮ್ಮಲ್ಲಿದ್ದಾರೆ. ಇದರ ಸದುಪಯೋಗ ಪಡೆದುಕೊಳ್ಳಿ ಎಂದರು.

ಮುಖ್ಯ ಭಾಷಣಕಾರರಾದ ಶ್ರೀ ಶ್ರೀಧರ ಸಾಗರರವರು ಮಾತನಾಡಿ "ಸೋಲೇ ಗೆಲುವಿನ ಸೋಪಾನ" ಆಟದಲ್ಲಿ ಸೋಲು, ಗೆಲುವು ಇರುವಂತದ್ದು. ಗೆದ್ದಾಗ ಹಿಗ್ಗದೆ, ಸೋತಾಗ ಕುಗ್ಗದೆ ಗುರಿ ಮುಟ್ಟಬೇಕು. ಹಿಂದು ಸೇವಾ ಪ್ರತಿಷ್ಠಾನ ಕಳೆದ 29 ವರ್ಷಗಳಿಂದ ಸಮಾಜ ಸೇವೆ ಮಾಡುತ್ತ ಬಂದಿದ್ದು, ಸಮಾಜ ಸೇವೆಗೆ ವಿದ್ಯಾವಂತ ಯುವಕ/ಯುವತಿಯ ರಿಗೆ ತರಬೇತಿಯ ಮೂಲಕ ಅವಕಾಶ ಮಾಡಿಕೊಟ್ಟಿರುತ್ತದೆ. ಸಮಾಜದಿಂದ ಪಡೆದುಕೊಂಡಿದ್ದನ್ನು ಕಿಂಚಿತ್ತಾದರೂ ಸಮಾಜಕ್ಕಾಗಿ ನೀಡಿದಾಗ ಮನಸ್ಸಿಗೆ ಸಂತೋಷವಾಗುತ್ತದೆ ಎಂದು ತಿಳಿಸಿದರು.

ವರದಿ - ವಿನಾಯಕ

# ನೆಲೆ ಆಶಾಕಿರಣದ ಆಶ್ರಯದಲ್ಲಿ ಮಕ್ಕಳ ಮಂಟಪ

ಆಶಾಕಿರಣ ನೆಲೆಯ ಆಶ್ರಯದಲ್ಲಿ ಮಕ್ಕಳ ಮಂಟಪ ಕಾರ್ಯಕ್ರಮ ದಿನಾಂಕ:24.01.09 ಮತ್ತು 25.01.09 ರಂದು ಜರುಗಿತು.

ಎರಡು ದಿನಗಳ ಕಾರ್ಯಕ್ರಮಗಳಲ್ಲಿ ವಿವಿಧ ಶಾಲೆಯ ಮಕ್ಕಳಿಗಾಗಿ ರಂಗೋಲಿ, ಚಿತ್ರಕಲೆ, ಕಬ್ಬಡಿ, ಖೋಖೋ, ಕಥೆ ಹೇಳುವ ಸ್ಪರ್ಧೆ, ಸಮೂಹ ಗಾಯನ, ನೃತ್ಯ, ಚರ್ಚಾಸ್ಪರ್ಧೆ ಇತ್ಯಾದಿ ವಿವಿಧ ರೀತಿಯ ಸ್ಪರ್ಧೆಗಳನ್ನು ನಡೆಸಲಾಯಿತು.

ಗೊಟ್ಟಿಗೆರೆ ಗ್ರಾಮಪಂಚಾಯ್ತಿ ಮಾಜಿ ಅಧ್ಯಕ್ಷ ಜಿ.ಕೆ.ರವಿ, ಸಂಭವ್ ಫೌಂಡೇಶನ್ ಅಧ್ಯಕ್ಷರಾದ ಶ್ರೀಮತಿ ಮೀನಾ ಜೈನ್, ಜಯಕರ್ನಾಟಕ ವೇದಿಕೆಯ ವೀವರ್ಸ್ ಕಾಲೋನಿ ಶಾಖೆಯ ಅಧ್ಯಕ್ಷ ತಪಸಿ ಅನಂತರಾಮಯ್ಯ, ಹಿಂದು ಸೇವಾ ಪ್ರತಿಷ್ಠಾನದ ಭೀಮಣ್ಣ ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮಕ್ಕಳಲ್ಲಿ ಕ್ರೀಡಾ ಮನೋಭಾವ ಬೆಳೆಸಲು ಇಂತಹ ಕಾರ್ಯಕ್ರಮಗಳು ಸಹಕಾರಿ ಎಂದು ಸಂಭವ್ ಫೌಂಡೇಶನ್ ಅಧ್ಯಕ್ಷರಾದ ಶ್ರೀಮತಿ ಮೀನಾ ಜೈನ್ ತಿಳಿಸಿದರು.

ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಸ್ಥಳೀಯ ಮುಖಂಡ ಪಿ.ಚಂದ್ರಶೇಖರ ಆಗಮಿಸಿ, ಮಾತನಾಡುತ್ತಾ, ಇಂತಹ ಕಾರ್ಯಕ್ರಮಗಳು ಮಕ್ಕಳ ಸಮಗ್ರ ಅಭಿವೃದ್ಧಿಗೆ ಪೂರಕವಾಗಲೆಂದು ಹಾರೈಸಿದರು. ಇನ್ನೋರ್ವ ಅತಿಥಿ ದಿನೇಶ್ ನೆಲೆ ಆಶಾಕಿರಣದ ಮಕ್ಕಳಿಗೆ ನೀಡುತ್ತಿರುವ ಸಂಸ್ಕಾರ ಶಿಕ್ಷಣದ ಕುರಿತು ಮೆಚ್ಚುಗೆ ಸೂಚಿಸಿದರು. ಪ್ರತಿಷ್ಠಾನದ ಸಂಚಾಲಕ ಎಸ್.ಎಲ್.ಕೃಷ್ಣಮೂರ್ತಿ ಸಂಸ್ಥೆಯ ಪರಿಚಯ ಮಾಡಿದರು. ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ಹಾಗೂ ಭಾಗವಹಿಸಿದ ಎಲ್ಲರಿಗೆ ಸಮಾಧಾನಕರ ಬಹುಮಾನ ನೀಡಲಾಯಿತು.

# ನರೇಂದ್ರ ನೆಲೆ ಆಶ್ರಯದಲ್ಲಿ ಮಕ್ಕಳ ಮಂಟಪ

ನರೇಂದ್ರ ನೆಲೆ ವತಿಯಿಂದ ಪ್ರತಿವರ್ಷದಂತೆ ಈ ವರ್ಷವೂ ಸಹ ದಿನಾಂಕ: 13.12.08 ರಂದು ಗಿರಿನಗರ ಪ್ರಿಯದರ್ಶಿನಿ ಶಾಲಾ ಮೈದಾನ ದಲ್ಲಿ ಮಕ್ಕಳ ಮಂಟಪ ಕಾರ್ಯಕ್ರಮ ನಡೆಸಲಾಯಿತು. 10 ಸರ್ಕಾರಿ ಶಾಲೆಯ ಮಕ್ಕಳು 10 ಸೇವಾಬಸ್ತಿಯ ಮಕ್ಕಳು ಸೇರಿ ಒಟ್ಟು 581 ಜನ ಭಾಗವಹಿಸಿದ್ದರು. ಹೊರಾಂಗಣ ಹಾಗೂ ಒಳಾಂಗಣ ಆಟಗಳು ನಡೆದವು. ಬೆಳಗ್ಗೆ ಉದ್ಘಾಟಕರಾಗಿ ಶ್ರೀ ಪದ್ಮನಾಭರೆಡ್ಡಿ ಭಾಗವಹಿಸಿದ್ದರು. ಮುಖ್ಯ ವಕ್ತಾರರಾಗಿ ಪ್ರತಿಷ್ಠಾನದ ಸಂಚಾಲಕರಾದ ಶ್ರೀ ಕೃಷ್ಣಮೂರ್ತಿಯವರು ಆಗಮಿಸಿ, ಪ್ರತಿಷ್ಠಾನ ಹಾಗೂ ನೆಲೆ ಬೆಳೆದು ಬಂದ ದಾರಿ ಹಾಗೂ ಅದರ ಧ್ಯೇಯೋದ್ದೇಶ ವಿವರಿಸಿದರು. ಮಕ್ಕಳ ಮಂಟಪದ ಉದ್ದೇಶ ಹಾಗೂ ಸೇವಾಬಸ್ತಿಯ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಮಕ್ಕಳ ಮಂಟಪದ ಪ್ರಯೋಜನದ ಬಗ್ಗೆ ತಿಳಿಸಿದರು. ಸಾಯಂಕಾಲ ಸಮಾರೋಪ ಕಾರ್ಯಕ್ರಮದಲ್ಲಿ ಶ್ರೀ ಮಿಲಿಂದ್‌ರವರು ಅತಿಥಿಗಳಾಗಿ ಆಗಮಿಸಿ ದ್ದರು. ಹಿಂದು ಸೇವಾ ಪ್ರತಿಷ್ಠಾನದ ನಿದೇಶಕರಾದ ಶ್ರೀಧರ ಸಾಗರ್‌ರವರು ನೆಲೆ ಹಾಗೂ ಮಕ್ಕಳ ಮಂಟಪದ ಬಗ್ಗೆ ತಿಳಿಸಿ ಬಹುಮಾನ ಪಡೆದ ಮಕ್ಕಳಿಗೆ ಬಹುಮಾನ ವಿತರಿಸಿದರು. ನೆಲೆ ಸಂಯೋಜಕರಾದ ಶ್ರೀ ಪ್ರಭಾಕರ್ ರಾವ್‌ರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**ಭಾರತೀಯ ಕುಟುಂಬ ಜೀವನ....**

(2ನೇ ಪುಟದಿಂದ...)

ಬಗ್ಗೆ ವಿವರಣೆ ಕೊಡುತ್ತಾ ಇಂದಿನ ಯಾಂತ್ರೀಕೃತ ಬದುಕಿನಲ್ಲಿ ಪ್ರತಿಯೊಬ್ಬರೂ ಈ ಕುಟುಂಬ ಪದ್ಧತಿಯನ್ನು ಅಳವಡಿಸಿ ಕೊಂಡು ಮುಂದಿನ ಪೀಳಿಗೆಗೆ ಹೇಗೆ ಮಾರ್ಗದರ್ಶಕ ರಾಗಬೇಕೆಂದು ಹಿತ ನುಡಿದರು.

ಮಯೂರ ಪರಿವಾರದ ಕಿರಿಯ ಸದಸ್ಯರಾದ ಚಂದ್ರಶೇಖರ್‌ರವರು ಬಂದಂತಹ ಎಲ್ಲಾ ಆಹ್ವಾನಿತರಿಗೆ ಸ್ವಾಗತವನ್ನು ಕೋರಿ ಕೊನೆಯಲ್ಲಿ ವಂದನೆಗಳನ್ನು ಅರ್ಪಿಸಿದರು. ಈ ಕಾರ್ಯಕ್ರಮವು ಆಹ್ವಾನಿತರೊಂದಿಗೆ ಸಹಭೋಜನದೊಂದಿಗೆ ಯಶಸ್ವಿಯಾಯಿತು.

ಕಾರ್ಯಕ್ರಮದಲ್ಲಿ ಆಹ್ವಾನಿತರೆಲ್ಲಗೂ ಮನನವಾದ ವಿಷಯಗಳೆಂದರೆ ಈ ಮಯೂರ ಕುಟುಂಬದ ಐದು ತಲೆಮಾರಿನ ವಂಶಸ್ಥರ ವಿವರಣೆಗಳು, ಕುಟುಂಬದಲ್ಲಿನ ಸಾಮರಸ್ಯ, ಮುಕ್ತ ಸಂವಾದ, ಸಾಮೂಹಿಕ ಭಜನೆ ಇತ್ಯಾದಿಗಳು.

ವರದಿ : **ಅಚ್ಯುತ ಕಾಮತ್**

# ಚಂದನ ನೆಲೆಯಲ್ಲಿ ಮಕ್ಕಳ ಸಾಮೂಹಿಕ ಹುಟ್ಟುಹಬ್ಬ

ಚಂದನ ನೆಲೆಯಲ್ಲಿ ಇತ್ತೀಚೆಗೆ ಧಾರ್ಮಿಕ ವಿಧಿವಿಧಾನಗಳ ಆಚರಣೆಯೊಂದಿಗೆ ಮಕ್ಕಳ ಸಾಮೂಹಿಕ ಹುಟುಹಬ್ಬ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಕ್ಕಳಿಗೆ ಹೊಸ ಬಟ್ಟೆ ವಿತರಿಸಲಾಯಿತು.

ಹಿಂದು ಸೇವಾ ಪ್ರತಿಷ್ಠಾನದ ಸಂಚಾಲಕರಾದ ಶ್ರೀ ಶಿ.ಲ ಕೃಷ್ಣಮೂರ್ತಿ, ಯೂತ್ ಫಾರ್ ಸೇವಾ ಸ್ವಯಂಸೇವಕರು ಕಾರ್ಯಕ್ರಮ ದಲ್ಲಿ ಪಾಲ್ಗೊಂಡಿದ್ದರು.

### ಯೂತ್ ಫಾರ್ ಸೇವಾ ವತಿಯಿಂದ ಸಂಕ್ರಾಂತಿ ಆಚರಣೆ

# "ಕಾರಾ"ಗೃಹದಲ್ಲಿ ಸಂಕ್ರಾಂತಿ ತಂದ "ಸಿಹಿ"

ಬೆಂಗಳೂರು : ಒಂದು ದೇಶದ ಕಾರಾಗೃಹಗಳನ್ನು ನೋಡಿ ಆ ದೇಶದ ಸಾಮಾಜಿಕ ಆರೋಗ್ಯ ಅಳೆಯಬಹುದೆಂದು ಪಾಶ್ಚಿಮಾತ್ಯ ಚಿಂತಕ ಅರಿಸ್ಟಾಟಲ್ ಹೇಳಿದ್ದಾನೆ. ಅಪರಾಧ ಮತ್ತು ಶಿಕ್ಷೆ ಸೇರಿದಾಗ ಹುಟ್ಟಿದ್ದೇ ಕಾರಾಗೃಹಗಳು. ಕಾರಾಗೃಹಗಳು ಅಪರಾಧಿಗಳನ್ನು ಸನ್ನಡತೆಗೆ ತಂದು ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವಂತಾಗಲು ಪರಿವರ್ತನಾ ಶಿಬಿರಗಳಾಗಿ ರೂಪುಗೊಳ್ಳಬೇಕಾಗಿತ್ತು. ಆದರೆ ಇಂದಿನ ಕಾರಾಗೃಹಗಳು ಪರಿವರ್ತನಾ ಶಿಬಿರಕ್ಕೆ ಬದಲಾಗಿ ಯಾತನಾ ಶಿಬಿರಗಳಾಗಿವೆ. ಇದಕ್ಕೆ ಮುಖ್ಯ ಕಾರಣ ಸರ್ಕಾರಿ ವ್ಯವಸ್ಥೆ ಮತ್ತು ಸಮಾಜಕ್ಕಿರುವ ಕೈದಿಗಳೆಡೆಗಿನ ನಿರ್ಲಕ್ಷ್ಯ ಭಾವ. ಕೈದಿಗಳನ್ನು ಸನ್ನಡತೆಗೆ ತರುವ ಸಲುವಾಗಿ ಕೆಲವು ಸ್ವಯಂ ಸೇವಾ ಸಂಸ್ಥೆಗಳು ಹಾಗೂ ವ್ಯಕ್ತಿಗಳು ಪ್ರಯತ್ನ ಮಾಡುತ್ತಿರುವುದು ಸ್ವಾಗತಾರ್ಹವಾದರೂ ಇದರ ವೇಗ ಕಡಿಮೆಯೇ. ಇಂತಹ ಸಮಾಜದ ನಿರ್ಲಕ್ಷಿತ ಕೈದಿಗಳೆಡೆಗೆ ಲಕ್ಷ್ಯ ನೀಡುವ ಪ್ರಯತ್ನ ಭಾಗವಾಗಿ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿ ಸಂಕ್ರಾಂತಿ ಉತ್ಸವ ಹಾಗೂ ಶ್ರೀ ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಶ್ರೀ ರಾಮಕೃಷ್ಣ ಮಠದ ಯತಿವರ್ಯರಾದ ಶ್ರೀ ತ್ಯಾಗೀಶ್ವರಾನಂದಜೀ ಮತ್ತು ಶ್ರೀ ಸತ್ಯವಿದಾನಂದಜೀ ಹಾಗೂ ಖ್ಯಾತ ಅಂಕಣಕಾರ ಶ್ರೀ ಚಕ್ರವರ್ತಿ ಸೂಲಿಬೆಲೆ ಭಾಗವಹಿಸಿ ಮಾತನಾಡಿದರು.

ಶ್ರೀ ತ್ಯಾಗೀಶ್ವರಾನಂದಜೀ ಮಾತನಾಡುತ್ತಾ ನಾವೆಲ್ಲರೂ ಬಂಧಿಗಳೇ, ಈ ಜಗತ್ತೇ ಒಂದು ಬಂಧನ. ಈ ಬಂಧನದಿಂದ ಬಿಡುಗಡೆಯ ಏಕೈಕ ಮಾರ್ಗ ಆಧ್ಯಾತ್ಮದೆಡೆಗೆ ಮನಸ್ಸನ್ನು ಕೇಂದ್ರಗೊಳಿಸುವುದೆಂದರು. ಹಸಿದ ಹೊಟ್ಟೆಗೆ ಬೇಕಾಗಿರುವುದು ವೇದಾಂತವಲ್ಲ ಹಾಗೆಯೇ ದುಃಖಿ ಜನರಿಗೆ ಬೇಕಾಗಿರುವುದು ನಿಸ್ವಾರ್ಥ ಸೇವೆ ಎಂದು ವಿವೇಕಾನಂದರ ಜೀವನವನ್ನು ಉದಾಹರಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಶ್ರೀ ರಾಮಕೃಷ್ಣ ಮಠದ ಸೇವಾಕಾರ್ಯಗಳನ್ನು ವಿವರಿಸಿದ ಸ್ವಾಮೀಜೀ ಶ್ರೀ ಮಠದ ವತಿಯಿಂದ ಎಲ್ಲಾ ಮಹಿಳಾ ಕೈದಿಗಳಿಗೆ ಬಟ್ಟೆಗಳನ್ನು ನೀಡುವುದಾಗಿ ತಿಳಿಸಿದರು.

ಚಕ್ರವರ್ತಿಯವರು ಮಾತನಾಡುತ್ತಾ ವಾಲ್ಮೀಕಿಯ ಜೀವನದಲ್ಲಿ ಉಂಟಾದ ಪರಿವರ್ತನೆಯನ್ನು ಉದಾಹರಿಸಿ ಯಾರೂ ಜನ್ಮತಃ ಅಪರಾಧಿಗಳಲ್ಲ. ದುಷ್ಟನಾಗಿದ್ದ ವಾಲ್ಮೀಕಿ ರಾಮನಾಮ ಜಪಿಸುತ್ತಾ ಜಗದ್ವಂದ್ಯ ಮುನಿಶ್ರೇಷ್ಠನಾದ. ಜೈಲಿನಲ್ಲಿಯೇ ಯೋಚಿಸಿ ದೇಶದ ಏಳಿಗೆ ಯೋಜನೆ ರೂಪಿಸಿದ ಸ್ವಾತಂತ್ರ್ಯ ವೀರರ ಹೆಸರುಗಳನ್ನು ನೆನಪಿಸಿದರು. ಕಾರಾಗೃಹದ ಒತ್ತಡ ಜೀವನದಿಂದ ಹೊರಬರಲು ಸದಾ ಕ್ರಿಯಾಶೀಲರಾಗಿರಬೇಕೆಂದು ತಿಳಿಸಿದರು. ಇದಕ್ಕಾಗಿ ಅಧ್ಯಯನ, ಧ್ಯಾನ, ಯೋಗ ಸದ್‌ವಿಚಾರಗಳ ಮನನ ಇತ್ಯಾದಿಗಳೆಲ್ಲಾ ಪರಿವರ್ತನೆಗೆ ಮಾರ್ಗಗಳಾಗಿವೆ ಎಂದರು. ಬಂಧನದಿಂದ ಪರಾರಿಯಾಗಿ ವಿದೇಶಕ್ಕೆ ಹೋಗಿ ಬರಿಗೈಲಿ ವೀರ ಯೋಧರ ಪಡೆ ಕಟ್ಟಿದ ಸುಭಾಷ್‌ಚಂದ್ರಭೋಸ್ ಮತ್ತು ಸ್ವಾತಂತ್ರ್ಯ ವೀರ ಸಾವರ್ಕರ್ ಕಥೆಯಂತೂ ಕೈದಿಗಳ ಮನದಲ್ಲಿ ಅಚ್ಚಳಿಯದೇ ಉಳಿಯಿತು.

ಕಾರ್ಯಕ್ರಮದಲ್ಲಿ ಕಾರಾಗೃಹದ ಮುಖ್ಯ ಅಧೀಕ್ಷಕರಾದ ಶ್ರೀ ವಿಶ್ವನಾಥಯ್ಯ ಮತ್ತು ಆಧಿವಕ್ತಾ ಪರಿಷತ್ತಿನ ಶ್ರೀ ಪ್ರಸನ್ನ ದೇಶಪಾಂಡೆ ಉಪಸ್ಥಿತರಿದ್ದರು. ವಂದೇ ಮಾತರಂ ಗಾಯನದಿಂದ ಪ್ರಾರಂಭಗೊಂಡ ಕಾರ್ಯಕ್ರಮವನ್ನು ಕಾರಾಗೃಹ ನಿವಾಸಿ ಶ್ರೀ ಸೂರ್ಯನಾರಾಯಣ್ ನಿರ್ವಹಿಸಿದರು. ಕಾರ್ಯಕ್ರಮದ ನಂತರ ಸಂಕ್ರಾಂತಿ ಪ್ರಯುಕ್ತ ಅಯ್ಯಪ್ಪ ಮಂದಿರದಲ್ಲಿ ವಿಶೇಷ ಪೂಜೆ ನಡೆಯಿತು. ತದನಂತರ ಕಾರಾಗೃಹದ ಎಲ್ಲಾ ನಿವಾಸಿಗಳಿಗೆ ಪ್ರಸಾದ ವಿತರಿಸಲಾಯಿತು.

ಕಾರಾಗೃಹ ನಿವಾಸಿಗಳು ಕಳೆದ ಡಿಸೆಂಬರ್ 5ರ ಸೈನಿಕ ದಿನಾಚರಣೆಯಂದು ಭಯೋತ್ಪಾದನೆ ವಿರೋಧಿಸಿ ಮುಂಬೈಯಲ್ಲಿ ಮಡಿದ ವೀರರಿಗೆ ಶ್ರದ್ಧಾಂಜಲಿ ಅರ್ಪಿಸಿ ಸಮಾಜದೆಡೆಗಿನ ತಮ್ಮ ಕಾಳಜಿ ಮೆರೆದಿದ್ದರು. ಈ ಬಾರಿಯ ಸಂಕ್ರಾಂತಿ ಕಾರ್ಯಕ್ರಮವು ಕೈದಿಗಳಲ್ಲಿ ಭರವಸೆಯ ನಾಳೆಗಾಗಿ ಒತ್ತಡದ ಜೀವನದಿಂದ ಹೊರಬರಲು ಪ್ರೇರೇಪಿಸಿದವು. ಹೀಗೆ ನಿರ್ಲಕ್ಷಿತರೆಡೆಗೆ ಲಕ್ಷ್ಯ ನೀಡುವ ಈ ದೇಸಿ ಚಿಂತನೆಯತ್ತ ಸೇವಾ ಕಾರ್ಯಕ್ರಮ ಕಾರಾಗೃಹ ಇತಿಹಾಸದಲ್ಲಿ ಮೊದಲಾಗಿ ದಾಖಲಾಯಿತು.

---

## ಉಪ್ಪಿನಂಗಡಿಯಲ್ಲಿ ಭಗವದ್ಗೀತೆ (4ನೇ ಪುಟದಿಂದ...)

ಎಲ್ಲಾ ಸಮಸ್ಯೆಗಳಿಗೂ ಭಗವದ್ಗೀತೆಯಲ್ಲಿ ಉತ್ತರ ಲಭಿಸುತ್ತದೆ ಎಂದು ವಿವರಿಸಿದರು.

ಭಗವದ್ಗೀತೆ ವಿತರಿಸಿ ಮಾತನಾಡಿದ ಹಿರಿಯ ವೈದ್ಯ ಡಾ॥ ಕೆ.ಜಿ.ಭಟ್‌ರವರು, ಹಿಂದೆ ಶಾಲೆಗಳಲ್ಲಿಯೇ ಭಗವದ್ಗೀತೆಯನ್ನು ಕಲಿಸುವ ವ್ಯವಸ್ಥೆಗಳಿದ್ದು ತತ್ಪರಿಣಾಮ ಉತ್ತಮ ಸಮಾಜವನ್ನು ಕಾಣಬಹುದಾಗಿತ್ತು. ಪ್ರಸಕ್ತ ವಿದ್ಯಾ ಸಂಸ್ಥೆಗಳಲ್ಲಿ ಭಗವದ್ಗೀತೆಯನ್ನು ಕಲಿಸುವ ವ್ಯವಸ್ಥೆಗಳಿಲ್ಲದಿರುವುದರಿಂದ ಸಮಾಜ ಹಾದಿ ತಪ್ಪಿದಂತಾಗಿದೆ. ಈ ಸೂಕ್ಷ್ಮ ಪರಿಸ್ಥಿತಿಯಲ್ಲಿ ಸಮಾಜದ ಎಲ್ಲಾ ವರ್ಗದ ಜನರಿಗೂ ಧರ್ಮ ಗ್ರಂಥಗಳ ಅರಿವು ಮೂಡಿಸುವ ಕಾರ್ಯಕ್ಕೆ ಶಿಶು ಮಂದಿರ ಸಮಿತಿಯು ಮುಂದಾಗಿರುವುದು ಅತ್ಯವಶ್ಯಕವಾಗಿರುವ ಉತ್ತಮ ಕಾರ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಶಿಶುಮಂದಿರ ಸಮಿತಿ ಅಧ್ಯಕ್ಷ ಯು.ಜಿ.ರಾಧರವರು, ಇಡೀ ವಿಶ್ವವೇ ಇದೀಗ ಆಕರ್ಷಿತಗೊಂಡಿರುವ ಭಗವದ್ಗೀತೆಯಂತಹ ಹಿಂದು ಧರ್ಮ ಗ್ರಂಥಗಳ ಬಗ್ಗೆ ಸ್ವತಃ ಹಿಂದುಗಳು ಅರಿವನ್ನು ಹೊಂದಿರಬೇಕಾಗುತ್ತದೆ. ಈ ದಿಶೆಯಲ್ಲಿ ಹಮ್ಮಿಕೊಂಡ ಕಾರ್ಯಕ್ಕೆ ಉಡುಪಿ ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥರು ಆಶೀರ್ವಾದ ರೂಪದಲ್ಲಿ 250 ಭಗವದ್ಗೀತೆಗಳನ್ನು ನೀಡಿ ಸಹಕರಿಸಿದ್ದಾರೆ ಎಂದರು.

ಸಮಿತಿ ಕಾರ್ಯದರ್ಶಿ ಯು.ಎಲ್. ಉದಯಕುಮಾರ್ ಪ್ರಸ್ತಾವಿಕ ಮಾತುಗಳನ್ನಾಡಿದರು. ಕಾರ್ಯದರ್ಶಿಗಳಾದ ರವೀಂದ್ರ ಶಿಲ್ಪಾ ಸ್ವಾಗತಿಸಿ, ಯು.ಕೆ.ರೋಹಿತಾಕ್ಷ ವಂದಿಸಿದರು.

**– ಉಪ್ಪಿನಂಗಡಿ ವರದಿ.**

RNI No. KAR KAN/2005/22027 Postal Registration No. KA/RNP/BGS/2041/2008-2010

# ನಾವು ಈ ದೇಶಕ್ಕಾಗಿ, ಸಂಪತ್ತು, ಸಮಯ ಹಾಗೂ ಸದಸ್ಯನನ್ನು ದಾನ ಮಾಡಬಹುದು – ಭ: ಪ್ರತಿಭಾ

ದಿನಾಂಕ: 12.01.2009 ರಂದು ಕೋಟೇಶ್ವರದ ಶಾಂತಿಧಾಮ ಪೂರ್ವ ಗುರುಕುಲದ ವತಿಯಿಂದ ಬೆಳದಿಂಗಳೂಟ ಕಾರ್ಯಕ್ರಮವು ಶ್ರೀ ಚಿಕ್ಕಮ್ಮನ ದೇವಾಲಯದ ವಠಾರದಲ್ಲಿ ನಡೆಯಿತು. ಕಾರ್ಯಕ್ರಮಕ್ಕೆ ಮುಖ್ಯ ಅಭ್ಯಾಗತರಾಗಿ ಆಗಮಿಸಿದ ಪ್ರತಿಷ್ಠಾನದ ಮಹಿಳಾ ವಿಭಾಗದ ಸಂಚಾಲಕಿ ಭ॥ ಪ್ರತಿಭಾರವರು ಮಾತನಾಡುತ್ತಾ ಕೆಲವು ವಿಜ್ಞಾನಿಗಳು ಪ್ರಪಂಚದಲ್ಲಿ ನಾಗರಿಕತೆ ಎಲ್ಲಿಂದ ಶುರು ವಾಯ್ತು ಅನ್ನೋದರ ಖಚಿತತೆಗೆ ಪ್ರಪಂಚದ ಹಿಸ್ಟೋ ಮ್ಯಾಪನ್ನು ತಯಾರಿಸಿದ್ದಾರೆ. ಅದರಲ್ಲಿ ಅವುಗಳ ದಿನಾಂಕವು ಇರುತ್ತದೆ. ಆದರೆ ಒಂದೇ ಒಂದು ನಾಗರಿಕತೆಗೆ ವಿವರಣೆ ಕೊಡಲು ಸೋಲುತ್ತಾರೆ. ಅದೇ ಸಿಂಧೂ ನಾಗರಿಕತೆ.

ಯಾವುದೇ ದೇಶದ ಮೇಲೆ ಕತ್ತಿಯನ್ನು ಎತ್ತದ ದೇಶ ಭಾರತ. ಸಕಲ ಚರಾಚರ ಜೀವಿಗಳಿಗೂ ಒಳ್ಳೆಯದಾಗಲಿ ಎಂದು ಬಯಸುವ ದೇಶ ಭಾರತ. ಭಾರತದಲ್ಲಿ ಹುಟ್ಟಿದ ನಾವೆಲ್ಲರೂ ಧನ್ಯರೇ ಸರಿ. ಇವತ್ತು ಭಾರತದ ಅಂತಃಸತ್ವವನ್ನು ಹಾಳು ಮಾಡಲು ಅನೇಕ ಪ್ರಯತ್ನಗಳು ಆಗುತ್ತಾ ಇವೆ. ನಮ್ಮ ಮಕ್ಕಳನ್ನು ಒಳ್ಳೆಯ ಸಂಸ್ಕೃತಿಯಲ್ಲಿ ಬೆಳೆಸುವ ಪ್ರಯತ್ನವನ್ನು ಮಾಡಬೇಕು. ಇವತ್ತು ನಾವೆಲ್ಲರೂ ಸಮಾಜಕ್ಕೆ, ಸಮಯ, ಸಂಪತ್ತು, ಸದಸ್ಯ ದಾನವನ್ನು ಮಾಡಬೇಕಾದ ಅಗತ್ಯ ಇದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗುರುಕುಲದ ಅಧ್ಯಕ್ಷರಾದ ಶ್ರೀಯುತ ಕೃಷ್ಣರಾಯ ಶಾನುಭಾಗರವರು ವಹಿಸಿದ್ದರು. ಸಂಚಾಲಕ ರಾದ ಶ್ರೀಯುತ ವಿಜಯಕುಮಾರರು ಕಾರ್ಯಕ್ರಮ ನಿರೂಪಿಸಿದರು. ಗುರುಕುಲದ ಮಾತಾಜಿ ಶ್ರೀಮತಿ ಪೂರ್ಣಿಮಾ ಧನ್ಯವಾದ ಅರ್ಪಿಸಿದರು.

**– ಶಾಂತಿಧಾಮ ವರದಿ.**

## ನಂದಗೋಕುಲದ ರೂವಾರಿ

# ಶ್ರೀ ವೆಂಕಟೇಶ ಗುರುನಾಯಕರಿಗೆ ರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರ




**ಪ್ರಶಸ್ತಿ ಸ್ವೀಕರಿಸುತ್ತಿರುವ ಶ್ರೀ ವೆಂಕಟೇಶ ಗುರುನಾಯಕ್**

ಪರಿತ್ಯಕ್ತ ಹಾಗೂ ಸಮಾಜದಿಂದ ನಿರ್ಲಕ್ಷಿಸಲ್ಪಟ್ಟ ಮಕ್ಕಳ ಕ್ಷೇತ್ರದಲ್ಲಿ ಅಭೂತಪೂರ್ವ ಕಾರ್ಯ ಮಾಡಿದ್ದಕ್ಕೆ ಕಲ್ಬುರ್ಗಿ ವಿವೇಕಾನಂದ ಕುಷ್ಠ ಸೇವಾ ಸಮಿತಿ ಸಂಚಾಲಕ ಹಾಗೂ ನಂದಗೋಕುಲದ ರೂವಾರಿ ಶ್ರೀ ವೆಂಕಟೇಶ ಗುರುನಾಯಕರಿಗೆ 2007ನೇ ಇಸವಿಯಲ್ಲಿ ನೀಡುವ ಮಕ್ಕಳ ಕಲ್ಯಾಣ ರಾಷ್ಟ್ರೀಯ ಪುರಸ್ಕಾರವನ್ನು ದಿನಾಂಕ 5, ಫೆಬ್ರವರಿ, 2009ರಂದು ದಿಲ್ಲಿಯ ವಿಜ್ಞಾನ ಭವನದಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ಕೇಂದ್ರ ಸರ್ಕಾರ ಪುರಸ್ಕಾರ ನೀಡಿ ಗೌರವಿಸಿದೆ.

ಯುಪಿಎ ಅಧ್ಯಕ್ಷೆ ಶ್ರೀಮತಿ ಸೋನಿಯಾ ಗಾಂಧಿ ಪ್ರಶಸ್ತಿ ನೀಡಿ ಗೌರವಿಸಿದರು. 1 ಲಕ್ಷ ರೂಪಾಯಿ ಡಿಡಿ, ಶಾಲು ಮತ್ತು ಪ್ರಮಾಣ ಪತ್ರ ನೀಡಿ ಸನ್ಮಾನಿಸಲಾಯಿತು. ಅನಾಥ ಮಕ್ಕಳ, ಬಾಲಕಾರ್ಮಿಕರ ಕುಷ್ಠರೋಗಿ ನಿರೋಗಿ ಮಕ್ಕಳ ಕ್ಷೇತ್ರದಲ್ಲಿ ಕಾರ್ಯ ಮಾಡಿದ್ದನ್ನು ಕೇಂದ್ರೀಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸನ್ಮಾನ್ಯ ಸಚಿವೆ ಶ್ರೀಮತಿ ರೇಣುಕಾ ಚೌಧರಿಯವರು ಮನಸಾರೆ ಕೊಂಡಾಡಿದರು.

Postal Registration No.
KA/RNP/BGS/2041/2008-2010
RNI No. KAR KAN /2005/22027
Office of Posting : Basavanagudi H.P.O.,BG-4. 15th of every month

SEWA DISHA
ಸೇವಾ ದಿಶಾ
2009 ಫೆಬ್ರವರಿ ಸಂಚಿಕೆ

ಇವರಿಗೆ

Printed, Published, Owned by **K. S. Nagabhushan** and Printed at **Rashtrotthana Mudranalaya**, K. G. Nagar, Bangalore - 560 019 and Published at **Ajitasri,** 8/28, Basavanagudi Road, Bangalore - 560 004. Editor : **K. R. Shivaswamy. Website :** www.hinduseva.org